# ಗೃಹ ರಕ್ಷಕರ ಹುದ್ದೆ: ಅರ್ಜಿ ಆಹ್ವಾನ

KarnatakaHelp.in

ಬೀದರ್: ಜಿಲ್ಲೆಯ ತಾಲ್ಲೂಕು ಘಟಕ ಮತ್ತು ಉಪ ಘಟಕಗಳಲ್ಲಿ ಹಾಲಿ ಖಾಲಿ ಇರುವ ದೀರ್ಘ ಕಾಲದಿಂದ ಗೈರು ಹಾಜರಾಗಿರುವ ಮತ್ತು ನಿಷ್ಕ್ರಿಯಗೊಳಿಸಿರುವ ಗೃಹ ರಕ್ಷಕರ ಸ್ಥಾನದಲ್ಲಿ ಹೊಸ ಗೃಹರಕ್ಷಕರನ್ನು ನೇಮಕ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಬೀದರ್ ಗೃಹ ರಕ್ಷಕ ದಳದ ಸಮಾದೇಷ್ಟರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೀದರ್ (2), ಧನ್ನೂರ (3), ಔರಾದ (1), ಕಮಲನಗರ (8), ಹುಲಸೂರ (13), ಮಂಠಾಳ (4) ಒಟ್ಟು 31 ಹುದ್ದೆಗಳು ಖಾಲಿ ಇವೆ. ಕನಿಷ್ಠ 10ನೇ ತರಗತಿ ಪಾಸಾಗಿರಬೇಕು. ವಯೋಮಿತಿ 20 ರಿಂದ 40 ವರ್ಷದೊಳಗಿರಬೇಕು. ವೈದ್ಯರಿಂದ ಶಾರೀರಿಕ ಸುಸ್ಥಿತಿಯ ಬಗ್ಗೆ ಶಾರೀರಿಕ ಅರ್ಹತಾ ಪ್ರಮಾಣ ಪತ್ರ, ಸ್ಥಳೀಯ ನಿವಾಸದ ಪ್ರಮಾಣ ಪತ್ರ, ಹಾಗೂ ಪೋಲಿಸ ಇಲಾಖೆಯಿಂದ ನೀಡಲಾದ ಗುಣ ನಡತೆ ಪ್ರಮಾಣ ಪತ್ರದ ದಾಖಲಾತಿಗಳು ಲಗತ್ತಿಸಬೇಕು. ಅರ್ಹರು ಆಯಾ ಘಟಕ ಮತ್ತು ಉಪ ಘಟಕದಲ್ಲಿ ಅರ್ಜಿಯನ್ನು ಪಡೆದು ಮೇ 23ರೊಳಗೆ ಆಯಾ ಘಟಕದ ಘಟಕಾಧಿಕಾರಿಗಳಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆಂದು ಅವರು ತಿಳಿಸಿದ್ದಾರೆ.

KarnatakaHelp.in